<u>ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು</u>

ಸಾಕ್ಷಿಯ ಹೆಸರು :- ಬಿರೇಶ್

ತಂದೆ/ ಗಂಡನ ಹೆಸರು :- ರಾಜೇಗೌಡ

ವಯಸ್ಸು :- 43 ವರ್ಷ

ಉದ್ಯೋಗ :- ಮುಖ್ಯಪೇದೆ ಮೈಸೂರು ರೈಲ್ವೆ ಪೋ ಠಾಣೆ

ವಾಸಸ್ಥಳ :- ಮೈಸೂರು

(ಸಾಕ್ಷಿಗೆ ದಿನಾಂಕಃ 02-02-2026 ರಂದು ಪ್ರಮಾಣ ವಚನ ಬೋಧಿಸಲಾಯಿತು)

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ</u>

ನಾನು 2011 ರಿಂದ 2018 ರವರೆಗೆ ಪೇದೆಯಾಗಿ ಮೈಸೂರು ರೈಲ್ವೆ ವಲಯದಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದು, 2018 ರಿಂದ ಇದುವರೆಗೂ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನೆ.

ದಿನಾಂಕ 07-03-2015 ರಂದು ಚಾಸಾ-14 ರವರು ಚಾಸಾ-11 ರವರೊಂದಿಗೆ ಆಂದ್ರದ ಇಂದೂಪುರಕ್ಕೆ ಹೋಗಿ ಆರೋಪಿ 1 ರವರನ್ನು ಪತ್ತೆ ಮಾಡಿ ಕರೆತರುವಂತೆ ಸೂಚಿಸಿದ್ದರು. ಅದೇ ದಿನ ನಾನು ಮತ್ತು ಚಾಸಾ-11 ರವರು ಇಂದೂಪುರಕ್ಕೆ ಹೋಗಿದ್ದು, ದಿ 08-03-2015 ರ ಬೆಳಗ್ಗೆ ಆರೋಪಿ 1 ರವರನ್ನು ಕರೆತಂದು ಚಾಸಾ-14 ರವರ ಮುಂದೆ ಹಾಜರುಪಡಿಸಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ನಾನು ಪತ್ತೆ ಮಾಡಿ ಹಾಜರುಪಡಿಸಿದ ವ್ಯಕ್ತಿಯಾಗಿರುತ್ತಾರೆ.

<u>**ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ. ಹೆಚ್ ವಿಬಿ ವಕೀಲರಿಂದಃ-**</u>

ಆರೋಪಿ 1 ರವರನ್ನು ಹಾಜರುಪಡಿಸಲು ನನಗೆ ಠಾಣೆಯಿಂದ ಯಾವುದೇ ಮೇಮೋ ಬಂದಿರಲಿಲ್ಲ, ಸಾಕ್ಷಿ ಮುಂದುವರೆದು ಮೌಖಿಕವಾಗಿ ಹೇಳಿದ್ದರು ಎನ್ನುತ್ತಾರೆ. ಆರೋಪಿಯನ್ನು ಪತ್ತೆ ಮಾಡುವ ಪೂರ್ವದಲ್ಲಿ ಈ ಹಿಂದೆ ನೋಡಿರಲಿಲ್ಲ. ಆರೋಪಿಯ ವಿಳಾಸವನ್ನು ಲಿಖಿತವಾಗಿ ನೀಡಿರಲಿಲ್ಲ, ಮೌಖಿಕವಾಗಿ ಹೇಳಿದ್ದು ನಾವು ಬರೆದುಕೊಂಡಿದ್ದೇವು. ಆರೋಪಿ 1 ರವರನ್ನು ಹಾಜರುಪಡಿಸಲು ನನಗೆ ಯಾವುದೇ ಸೂಚನೆ ನೀಡಿರಲಿಲ್ಲ ಮತ್ತು ನಾನು ಆರೋಪಿ 1 ರವರನ್ನು ಚಾಸಾ-14 ರವರ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು